ದಿನಾಂಕ 26.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಶ್ರೀ ವಿ.ಜಿ.ಆರ್ ವಕೀಲರಿಂದಃ-**

ದಾವಾಸ್ವತ್ತನ್ನು ನನ್ನ ಗಂಡ ಎಂ.ಕೆ ಮುತ್ತಣ್ಣ ರವರು ಭೀಮಯ್ಯ ರವರಿಂದ ಖರೀದಿಸಿರುತ್ತಾರೆ ಎಂದರೆ ಸರಿ. ಆ ಬಗ್ಗೆ ಕ್ರಯಪತ್ರ ಬರೆಸಿಕೊಂಡಿರುವುದಿಲ್ಲ, ಬದಲಿಗೆ ನನ್ನ ಗಂಡನ ಹೆಸರಿಗೆ ಪಹಣಿ ಮಾತ್ರ ದಾಖಲಾಗಿರುತ್ತದೆ. ಸಾಕ್ಷಿಯು ಮುಂದುವರೆದು ಭೀಮಯ್ಯರವರು ನನ್ನ ಗಂಡನಿಂದ ಸಾಲ ಪಡೆದಿದ್ದು, ಸದರಿ ಸಾಲದ ಹಣವನ್ನು ಹಿಂತಿರುಗಿಸದೇ ಇದುದ್ದರಿಂದ ಅವರು ದಾವಾಸ್ವತ್ತಿನ ಪಹಣಿಯನ್ನು ನನ್ನ ಗಂಡನ ಹೆಸರಿಗೆ ವರ್ಗಾವಣೆ ಮಾಡಿಸಿಕೊಳ್ಳಲು ಒಪ್ಪಿಗೆಯನ್ನು ನೀಡಿದ್ದರು ಎಂದು ಉತ್ತರಿಸಿರುತ್ತಾರೆ. ಭೀಮಯ್ಯರವರು ನನ್ನ ಗಂಡನಿಂದ ಸಾಲ ಪಡೆದ ಬಗ್ಗೆ ಲಿಖಿತ ದಾಖಲೆ ಇರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ವ್ಯವಹಾರವು ನನ್ನ ಮದುವೆಗಿಂತ ಮೊದಲು ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ.

ಭೀಮಯ್ಯರವರಿಗೆ ರೂ. 25,000/- ಹಣವನ್ನು ಸಾಲವಾಗಿ ನೀಡಿದುದ್ದಾಗಿ ನನ್ನ ಗಂಡ ನನ್ನ ಬಳಿ ತಿಳಿಸಿದ್ದರು. ದಾವಾಸ್ವತ್ತಿನ ಮೂಲ ಸರ್ವೆ ನಂ. 211/1. ಸರ್ವೆ ನಂ. 211/2 ಕುಳ ಸಂಖ್ಯೆ 7 ರಲ್ಲಿ ಬರುತ್ತದೆ ಎಂದರೆ ಸರಿ. ನಿಶಾನೆ ಡಿ-3 ದಾಖಲೆಯು ಕಾವೇರಪ್ಪ ಮತ್ತು ಭೀಮಯ್ಯರವರ ಜಂಟಿ ಹೆಸರಿನಲ್ಲಿ ಇದೆ ಎಂದರೆ ಸರಿ. ನಿಶಾನೆ ಡಿ-3 ರ ಪ್ರಕಾರ ಸರ್ವೆ ನಂ. 211 ರಲ್ಲಿ 3.41 ಎಕರೆ ಜಮೀನು ಇರುವ ಬಗ್ಗೆ ನಮೂದು ಇದೆ ಎಂದರೆ ಸರಿ. ಸರ್ವೆ ನಂ. 211/1 ರಲ್ಲಿ 90 ಸೆಂಟ್ಸ್ ವಿಸ್ತೀರ್ಣ ನಮೂದು ಇದೆ ಎಂದರೆ ಸರಿ. ಸರ್ವೆ

ನಂ. 211/2 ರ 2.50 ಎಕರೆ ಸ್ವತ್ತಿಗೆ ಸಿ.ಆರ್.ಸಿ ದಾಖಲೆಯಾಗಿರುವ ಬಗ್ಗೆ ನಿ.ಡಿ-3 ರಲ್ಲಿ ನಮೂದು ಇದೆ ಎಂದರೆ ಸರಿ. ಸರ್ವೆ ನಂ. 211 ರಲ್ಲಿನ 3.41 ಎಕರೆ ಸ್ವತ್ತಿನ ಪೈಕಿ ಕಾವೇರಪ್ಪನ ಹಿಸ್ಸೆಗೆ ಹಂಚಿಕೆಯಾಗಿದ್ದ 2.50 ಎಕರೆ ಸ್ವತ್ತಿನ ಸಿ.ಆರ್.ಸಿ ಪ್ರಮಾಣಪತ್ರವನ್ನು ಅವರ ಹೆಸರಿಗೆ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂ. 211 ರಲ್ಲಿ 2.50 ಎಕರೆ ನನ್ನ ಗಂಡನ ಹೆಸರಿಗೆ ಸಿ.ಆರ್.ಸಿ ಪ್ರಮಾಣಪತ್ರವಾದ ಬಳಿಕ, ಉಳಿದ 91 ಸೆಂಟ್ಸ್ ಜಾಗ ಭೀಮಯ್ಯರವರ ಹೆಸರಿನಲ್ಲಿ ಹಾಗೆಯೇ ಇರಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ 91 ಸೆಂಟ್ಸ್ ಜಾಗದ ಪಹಣಿಯು ಭೀಮಯ್ಯನ ಮಕ್ಕಳ ಹೆಸರಿನಲ್ಲಿ ದಾಖಲಾಗಿದೆ. ನಿ.ಡಿ-4 ರ ಕಲಂ 3 ರಲ್ಲಿ ಕಾವೇರಪ್ಪ ಮತ್ತು ಭೀಮಯ್ಯರವರ ಹೆಸರು ಜಂಟಿಯಾಗಿ ನಮೂದು ಇದೆ. ನಿ.ಡಿ-3 ಮತ್ತು 4 ದಾಖಲೆಗಳಲ್ಲಿ ನನ್ನ ಗಂಡನ ಹೆಸರು ನಮೂದು ಇರುವುದಿಲ್ಲ. ನಿ.ಡಿ-6 ರ ಆದೇಶವನ್ನು ನಾನು ಓದಿರುತ್ತೇನೆ. ನಿ.ಡಿ-6 ರಲ್ಲಿ ಸರ್ವೆ ನಂ. 211/2 ನನ್ನ ಗಂಡನ ಪಿತ್ರಾರ್ಜಿತ ಆಸ್ತಿ ಎಂದು ನಮೂದಿಸಿದ್ದಾರೆ ಎಂದರೆ ಸರಿ. ದಾವಾಸ್ವತ್ತು ನನ್ನ ಮಾವನ ಪಿತ್ರಾರ್ಜಿತ ಆಸ್ತಿಯಾಗಿರುವುದರಿಂದ ವಾದಿಗಳಿಗೆ ದಾವಾಸ್ವತ್ತಿನಲ್ಲಿ ಸಮನಾದ ಹಿಸ್ಸೆ ಇದೆ ಎಂದರೆ ಸರಿಯಲ್ಲ. ಸದರಿ ಹಿಸ್ಸೆಯನ್ನು ಕೊಡುವುದರಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ದಾವಾಸ್ವತ್ತು ನನ್ನ ಗಂಡನ ಸ್ವಯಾರ್ಜಿತ ಸ್ವತ್ತು ಎಂದು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ-** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ

**(ಸಾಕ್ಷಿದಾರರ ಸಹಿ)**

ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.